**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.34/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಪ್ಪ ಸಾಗರ | ಸಿಡಬ್ಲ್ಯೂ | 7 |
| ತಂದೆಯ ಹೆಸರು | ದುರ್ಗಪ್ಪ | ಪಿಡಬ್ಲ್ಯೂ | 4 |
| ವಯಸ್ಸು | 56 ವರ್ಷ | | |
| ಉದ್ಯೋಗ | ಪಿ.ಎಸ್.ಐ, ಕಾಗಿನೆಲೆ ಪೊಲೀಸ ಠಾಣೆ | | |
| ವಾಸಸ್ಥಳ | ಕಾಗಿನಲೆ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 04.03.2016 ರಿಂದ ದಿನಾಂಕಃ 20.05.2020 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಎ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 21.11.2019 ರಂದು ಚಾ.ಸಾ-16 ಅವರ ಜೊತೆಯಾಗಿ ಇಲಾಖಾ ಜೀಪಿನಲ್ಲಿ ನಾನು ಮತ್ತು ಚಾ.ಸಾ-8 ರಿಂದ 11 ಎಲ್ಲರೂ ಸೇರಿ ಠಾಣೆಯನ್ನು ಬೆಳಗಿನ 10-00 ಘಂಟೆಗೆ ಹೊರಟು ಪೆಟ್ರೋಲ್ ಡ್ಯೂಟಿ ಮಾಡಿ ಮಧ್ಯಾಹ್ನ 12-00 ಘಂಟೆಗೆ ಗುತ್ತಲ ಬ್ರಿಡ್ಜ ಹತ್ತಿರ ಇದ್ದಾಗ ಒಟ್ಟು 4 ಜನ ಎರಡು ಗಾಡಿಯಲ್ಲಿ ಗುತ್ತಲ ಕಡೆಯಿಂದ ಹಾವೇರಿ ಕಡೆಗೆ ಬರುತ್ತಿದ್ದರು. ನಂತರ 4 ಜನ ವ್ಯಕ್ತಿಗಳು ತಮ್ಮ ಮೋಟಾರ ಸೈಕಲಗಳನ್ನು ನಮ್ಮ ಜೀಪನ್ನು ಬಿಟ್ಟು ಓಡಿಹೋಗಲು ಪ್ರಯತ್ನಿಸಿರುತ್ತಾರೆ. ನಂತರ ನಮ್ಮ

ಇಲಾಖಾ ಜೀಪಿನಲ್ಲಿ ಇದ್ದ 4 ಜನ ಸಿಬ್ಬಂದಿಗಳು ಹಿಡಿದುಕೊಂಡು ಬಂದು ಆರೋಪಿಗಳನ್ನು ಚಾ.ಸಾ-16 ಇವರ ಮುಂದೆ ಹಾಜರುಪಡಿಸಿರುತ್ತಾರೆ.

2) ನಂತರ 4 ಜನ ಆರೋಪಿಗಳನ್ನು ಚಾ.ಸಾ-16 ಇವರು ವಿಚಾರಣೆ ಮಾಡಿದಾಗ 4 ಜನ ವ್ಯಕ್ತಿಗಳು ಎರಡು ಮೋಟಾರ ಸೈಕಲಗಳ ದಾಖಲಾತಿಗಳು ಅವರ ಮನೆಯಲ್ಲಿ ಇರುತ್ತವೆ ಎಂದು ತಿಳಿಸಿರುತ್ತಾರೆ. ನಂತರ 4 ಜನ ವ್ಯಕ್ತಿಗಳ ವಿಚಾರಣೆಗಾಗಿ ಹಾವೇರಿಯ ಶಹರ ಪೊಲೀಸ ಠಾಣೆಗೆ ಕರೆದುಕೊಂಡು ಬಂದಿರುತ್ತವೆ. ನಂತರ ಎರಡು ಮೋಟಾರ ಸೈಕಲಗಳನ್ನು ಹಾವೇರಿ ಶಹರ ಪೊಲೀಸ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ನಂತರ 4 ಜನ ವ್ಯಕ್ತಿಗಳನ್ನು ಚಾ.ಸಾ16 ಇವರ ವಿಚಾರಣೆ ಮಾಡಿದಾಗ 4 ಜನ ವ್ಯಕ್ತಿಗಳು ಅವರ ಜೊತೆ ತಂದ ಎರಡು ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದುಕೊಂಡು ಅವರ ಹೇಳಿಕೆ ಪಡೆದುಕೊಂಡಿರುತ್ತೇವೆ . ನಂತರ ಆರೋಪಿಗಳು ಇತರೇ ಸ್ಥಳಗಳಲ್ಲಿ ಮೋಟಾರ ಸೈಕಲ ಕಳ್ಳತನ ಮಾಡಿ ಗುಜರಿಗೆ ಹಾಕಿರುತ್ತೇವೆ ಎಂದು ಚಾ.ಸಾ-16 ಇವರ ಮುಂದೆ ಹೇಳಿಕೆ ನೀಡಿದ್ದಾರೆ.

3) ಆರೋಪಿಗಳು ತಮ್ಮ ಜೊತೆ ತಂದಿರುವಂತಹ ಎರಡು ಮೋಟಾರ ಸೈಕಲ ನೋಡಿದರೆ ಗುರುತಿಸಬಲ್ಲೆ. 4 ಜನ ವ್ಯಕ್ತಿಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ 4 ಜನ ಆರೋಪಿತರೇ ನಾವು ಪೊಲೀಸ ಠಾಣೆಯಲ್ಲಿ ನೋಡಿದ ವ್ಯಕ್ತಿಗಳಾಗಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರಿಂದಃ ಆರೋಪಿತರ ಪರವಾಗಿಃ</u>**

4) ಚಾ.ಸಾ-16 ಇವರ ಯಾವ ದಿವಸ ಪೆಟ್ರೋಲಿಂಗಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ಪೆಟ್ರೋಲಿಂಗಗೆ ಹೋದಾಗ ನಮ್ಮ ಜೊತೆಯಲ್ಲಿ ಬಂದಂತಹ ಹಾವೇರಿ ಶಹರ ಸಿಬ್ಬಂದಿಗಳ ಎಲ್ಲ ವ್ಯಕ್ತಿಗಳ ಹೆಸರು ನೆನಪಿರುವದಿಲ್ಲ. ನಾವು ಪೆಟ್ರೋಲಿಂಗಗೆ ಹೋಗುವಾಗ ಚಾ.ಸಾ-16 ಇವರು ಮೂವಮೆಂಟ್ ರಿಜಿಸ್ಟರನಲ್ಲಿ

ಬರೆದಿರುತ್ತಾರೆ. ಚಾ.ಸಾ–16 ಇವರು ಮೂವಮೆಂಟ್ ರಿಜಿಸ್ಟರನಲ್ಲಿ ಪೆಟ್ರೋಲಿಂಗ್ ಡ್ಯೂಟಿಗೆ ಹೋಗಿರುವ ಕುರಿತಾಗಿ ಬರೆದಿರುವದನ್ನು ನಾನು ನೋಡಿದ್ದೇನೆ. ಸದರಿ ಮೂವಮೆಂಟ್ ರಿಜಿಸ್ಟರನಲ್ಲಿ ಚಾ.ಸಾ–16 ಇವರು ಮೇಲೆ ಮತ್ತು ಕೆಳಗಡೆ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ . ನಾವು ಪೆಟ್ರೋಲಿಂಗ ಡ್ಯೂಟಿಗೆ ಹೋದ ಜೇಪ ನಂಬರಃ ಕೆಎ–27/ಜಿ–414 ಆಗಿರುತ್ತದೆ.

5) ಸದರಿ ಜೀಪಿನ ನೊಂದಣಿ ಸಂಖ್ಯೆ ಕರಿ ಬಣ್ಣದ ನಂಬರ ಪ್ಲೇಟನಲ್ಲಿ ಬಿಳಿ ಬಣ್ಣದಿಂದ ಬರೆಯಲಾಗಿರುತ್ತದೆ. 1 ನೇ ಆರೋಪಿಯನ್ನು ನಮ್ಮ ಯಾವ ಸಿಬ್ಬಂದಿ ಹಿಡಿದುಕೊಂಡು ಬಂದಿರುತ್ತಾರೆ ಎಂದು ಅವರ ಹೆಸರು ನನಗೆ ನೆನಪಿಲ್ಲ. 4 ಜನ ವ್ಯಕ್ತಿಗಳು ತಮ್ಮ ಮೋಟಾರ ಸೈಕಲನ್ನು ಬಿಟ್ಟು ಹೋದ ಸ್ಥಳದಲ್ಲಿ ನಾವು ಪಂಚನಾಮೆಯನ್ನು ಮಾಡಿರುವದಿಲ್ಲ, ಆದರೆ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇವೆ. ರಸ್ತೆಯ ಮೇಲೆ ಎರಡು ಮೋಟಾರ ಸೈಕಲಗಳನ್ನು ಬಿಟ್ಟುಹೋದ 4 ವ್ಯಕ್ತಿಗಳು ಒಂದು ಮೋಟಾರ ಸೈಕಲನಲ್ಲಿ ಯಾವ ಯಾವ ಯಾವ ಆರೋಪಿ ಇದ್ದರು ಎಂದುಅ ವರ ಹೆಸರು ಹೇಳಲು ಆಗುವದಿಲ್ಲ. ಪೊಲೀಸ ಠಾಣೆಯಲ್ಲಿ ಮಾಡಿದಂತಹ ಜಪ್ತು ಪಂಚನಾಮೆಗೆ ನಾನು ಸಹಿ ಮಾಡಿರುವದಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಚಾ.ಸಾ–16 ಇವರು ಯಾವ ದಿವಸ ತೆಗೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ, ಆದರೆ ದಿನಾಂಕಃ 22.11.2019 ರಂದು ಪಡೆದುಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಯಾವ ಗಾಡಿಯ ಯಾವ ಭಾಗಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಹೇಳಲು ಆಗುವದಿಲ್ಲ ಅಂದರೆ ಸರಿ.

6) ಚಾ.ಸಾ–16 ಇವರು ನಮ್ಮೆಲ್ಲರನ್ನೂ ನಮ್ಮ ಇಲಾಖಾ ಜೀಪಿನಲ್ಲಿ ಪೆಟ್ರೋಲಿಂಗ ಡ್ಯೂಟಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಹೇಳಿದಂತೆ

ಆರೋಪಿಗಳು ಯಾವ ಮೋಟಾರ ಸೈಕಲನ ಯಾವ ಭಾಗಗಳನ್ನು ಗುಜರಿಗೆ ಹಾಕಲಾಗಿರುತ್ತದೆ ಎಂದು ಈಗ ಹೇಳಲು ಬರುವದಿಲ್ಲ. 5 ಮತ್ತು 6 ನೇ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎನ್.ಜಿ.ಹೆಚ್ 2 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಪಾಟೀ ಸವಾಲುಃ ಶ್ರೀ.ಪಿ.ಜಿ.ಪಿ ವಕೀಲರು 4 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.